# Veda International School

Kusugal Road, Hubballi

(Proposed ICSE Board)

CLASS : 9 SUBJECT : KANNADA

## ಅಧ್ಯಾಯ 1. ನಾಟ್ಯ ಮಯೂರಿ

- ಡಾ. ಸಾ.ಶಿ .ಮರುಳಯ್ಯ.

### ಲೇಖಕರ ಪರಿಚಯ

### ಕವಿ - ಡಾ. ಸಾ.ಶಿ .ಮರುಳಯ್ಯ

ಖ್ಯಾತ ಸಾಹಿತಿ ಡಾ. ಸಾ.ಶಿ. ಮರುಳಯ್ಯ ಅವರು ಬರೆದ ಕೃತಿ-ನಾಟ್ಯಮಯೂರಿ. ಚೋಳರು ಹಾಗೂ ಹೊಯ್ಸಳರ ಮಧ್ಯೆ ನಡೆದ ಸಂಘರ್ಷದ ಐತಿಹಾಸಿಕ ಕಾದಂಬರಿ ಇದು. ನಾಟ್ಯಮಯೂರಿ ಶಾಂತಲೆಯ ಪಾತ್ರವನ್ನು ವಿಶೇಷವಾಗಿ ಚಿತ್ರಿಸಿದ ಕೃತಿ ಇದು.

**ಜನನ** : ಕವಿ, ವಿಮರ್ಶಕ, ಸಂಶೋಧಕ ಸಾ.ಶಿ. ಮರುಳಯ್ಯ ಅವರು ಜನಿಸಿದ್ದು 1931 ಜನವರಿ 28ರಂದು. ತುಮಕೂರು ಜಿಲ್ಲೆ ಚಿಕ್ಕನಾಯಕನಹಳ್ಳಿಯ ಸಾಸಲು ಗ್ರಾಮದವರು. ತಾಯಿ ಸಿದ್ದಮ್ಮ, ತಂದೆ ಶಿವರುದ್ರಯ್ಯ. ಪ್ರಾಥಮಿಕ ಶಿಕ್ಷಣ ಪಡೆದದ್ದು ಚಿತ್ರದುರ್ಗದಲ್ಲಿ.ಸಾ.ಶಿ. ಮರುಳಯ್ಯ ಮೈಸೂರು ವಿಶ್ವವಿದ್ಯಾಲಯದಿಂದ ಕನ್ನಡ ಸಾಹಿತ್ಯದಲ್ಲಿ ಸ್ನಾತಕೋತ್ತರ ಪದವಿ ಪಡೆದ ಇವರು, ಹಂಪಿ ವಿಶ್ವವಿದ್ಯಾಲಯದಲ್ಲಿ ಕೆಳದಿಯ ಅರಸರು ಮತ್ತು ಕನ್ನಡ ಸಾಹಿತ್ಯ ವಿಷಯ ಮಂಡನೆ ಮಾಡಿ ಪಿಎಚ್‌ಡಿ ಪದವಿ ಪಡೆದರು. ಅಧ್ಯಾಪಕರಾಗಿ, ಉಪನ್ಯಾಸಕರಾಗಿ, ಪ್ರಾಂಶುಪಾಲರಾಗಿ ಕಾರ್ಯ ನಿರ್ವಹಿಸಿ ನಿವೃತ್ತರಾದರು.

**ಕೃತಿಗಳು** : ಶಿವತಾಂಡವ, ವಿಪರ್ಯಾಸ, ಘೋಷವತಿ, ರೂಪಸಿ, ಚೈತ್ರ- ಜ್ಯೋತಿ, ಬೃಂದಾವನ ಲೀಲೆ, ನನ್ನ ಕವನಗಳು(ಕವನ ಸಂಕಲನಗಳು), ಹೇಮಕೂಟ, ಪುರುಷ ಸಿಂಹ (ಕಾದಂಬರಿಗಳು), ಕೆಳದಿಯ ಅರಸರು ಮತ್ತು ಕನ್ನಡ ಸಾಹಿತ್ಯ, ಹರಿಹರನ ಹತ್ತು ರಗಳೆಗಳು, ಮರುಳಸಿದ್ದೇಶ್ವರ ವಚನವೈಭವ, ಅಗ್ರ ತಾಂಬೂಲ (ಸಂಪಾದಿತ ಕೃತಿಗಳು) ಇವರ ಪ್ರಮುಖ ಕೃತಿಗಳು.

**ಪ್ರಶಸ್ತಿಗಳು** : ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು ಆಗಿದ್ದ ಇವರು ಕೆಲಕಾಲ ರಾಜ್ಯ ಭಾಷಾ ಆಯೋಗದ ಸದಸ್ಯರಾಗಿಯೂ ಸೇವೆ ಸಲ್ಲಿಸಿದ್ದಾರೆ. ಇವರಿಗೆ ರಾಜ್ಯ ಸಾಹಿತ್ಯ ಅಕಾಡೆಮಿ ಬಹುಮಾನ, ದೇವರಾಜ ಬಹದ್ದೂರ್ ಬಹುಮಾನ, ಕರ್ನಾಟಕ ಸಾಹಿತ್ಯ ಅಕಾಡೆಮಿಯ ಗೌರವ ಪ್ರಶಸ್ತಿ ಹಾಗೂ ರಾಜ್ಯೋತ್ಸವ ಪ್ರಶಸ್ತಿಗಳು ಸಂದಿವೆ

### ಪದಗಳ ಅರ್ಥ ತಿಳಿಯಿರಿ.

1. ನರ್ತಕಿ = ನೃತ್ಯಮಾಡುವವಳು
2. ಗುಡಿ = ದೇವಾಲಯ, ದೇಗುಲ
3. ಪ್ರೇಕ್ಷಕ = ನೋಡುವವನು
4. ಬ್ರಹ್ಮಾಂಡ = ಜಗತ್ತು
5. ಪ್ರಾಂಗಣ = ಅಂಗಳ
6. ತರುಣ = ಯುವಕ
7. ಯೋಧ = ಸೈನಿಕ
8. ಶತ್ರು . = ವೈರಿ
9. ಅನುಮತಿ = ಒಪ್ಪಿಗೆ
10. ಅಕಾಲ ಮೃತ್ಯು = ಅವೇಳೆಯಲ್ಲಾದ ಮರಣ
11. ಪಿತೃಸಮಾನ = ತಂದೆಗೆ ಸಮಾನ
12. ವಿಜಯೋತ್ಸವ = ಗೆಲುವಿನ ಸಮಾರಂಭnada
13. ಡಣಾಯಕ = ಸೇನಾಪತಿ
14. ಪರಿಣತ = ನಿಪುಣ

15.ಸ್ನೇಹಿತೆ = ಗೆಳತಿ 16. ಮಂಡಿಯೂರು = ಮೊಣಕಾಲೂರು

17. ಮಂತ್ರಮುಗ್ಧ = ಮರುಳಾಗು 18. ಸೋಂಕಿತು = ತಗಲಿತು 19. ತಾಂಡವ = ಒಂದು ಬಗೆಯ (ಶಿವನ) ನೃತ್ಯ

## ಟಿಪ್ಪಣಿ

## ನಾಟ್ಯ ಮಯೂರಿ -ರಾಣಿ ಶಾಂತಲೆ.

ರಾಣಿ ಶಾಂತಲಾ ದೇವಿ ಹೊಯ್ಸಳ ಸಾಮ್ರಾಜ್ಯದ ಪ್ರಖ್ಯಾತ ಸಾಮ್ರಾಟ ವಿಷ್ಣುವರ್ಧನನ ಪತ್ನಿ. ಈಕೆ ನಾಟ್ಯರಾಣಿ ಶಾಂತಲೆ ಎಂದು ಪ್ರಸಿದ್ಧಿ ಪಡೆದಿದ್ದಾಳೆ. ಇವಳ ಜನ್ಮ ಸ್ಥಳ ಬಳ್ಳಿಗಾವೆ. ಈ ಸ್ಥಳ ಇಂದಿನ ದಿನದ ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲ್ಲೂಕಿನಲ್ಲಿರುವ ಒಂದು ಗ್ರಾಮ. ಇವಳು ಸಂಗೀತ, ನರ್ತನ, ವಾದನಗಳಂತಹ ಲಲಿತ ಕಲೆಗಳಲ್ಲಿ ನಿಪುಣೆಯಾಗಿದ್ದಳು. ಹಾಗೂ ಜೈನ ಧರ್ಮವನ್ನು ಪರಿಪಾಲಿಸುತ್ತಿದ್ದಳು. ಶಾಂತಲಾ ದೇವಿಯು ಸೌಂದರ್ಯವತಿಯಾಗಿದ್ದು, ಇವಳ ಸೌಂದರ್ಯವನ್ನು ಹಲವಾರು ಕವಿಗಳು ವರ್ಣಿಸಿದ್ದಾರೆ. ಕೆಲವು ಕವಿಗಳು ಬೃಹಸ್ಪತಿ ಹಾಗೂ ವಾಚಸ್ಪತಿ ಎಂದು ಹೇಳುವ ಮೂಲಕ ಅವಳ ಜಾಣ್ಮೆ, ಸಂಗೀತ, ನೃತ್ಯಗಳನ್ನು ಹೊಗಳಿದ್ದಾರೆ.

## ಹೊಯ್ಸಳರು

ಹೊಯ್ಸಳರು ಕರ್ನಾಟಕದ ಪ್ರಮುಖ ರಾಜಮನೆತನಗಳಲ್ಲಿ ಒಬ್ಬರು. ಇವರು ಸುಮಾರು 10ನೆಯ ಶತಮಾನದಿಂದ 14ನೆಯ ಶತಮಾನದವರೆಗೆ ಆಳ್ವಿಕೆ ನಡೆಸಿದರು. ಹೊಯ್ಸಳ ಸಾಮ್ರಾಜ್ಯದ ರಾಜಧಾನಿ ಹಾಸನ ಜಿಲ್ಲೆಯಲ್ಲಿರುವ ದ್ವಾರಸಮುದ್ರ(ಇಂದಿನ ಹಳೇಬೀಡು). ಜಾನಪದ ನಂಬಿಕೆಯಂತೆ, 'ಹೊಯ್ಸಳ' ಎಂಬ ಹೆಸರು ಈ ವಂಶದ ಸಂಸ್ಥಾಪಕ ಸಳನಿಂದ ಉತ್ಪತ್ತಿಯಾಗಿದೆ. ದಂತಕತೆಯ ಪ್ರಕಾರ ಸೊಸೆವೂರಿನ(ಸೊಸೆಯೂರಿನ)ವಾಸಂತಿಕಾ ಮಂದಿರದಲ್ಲಿ ಹುಲಿಯು ಬಂದಾಗ ಅದನ್ನು ಹೊಡೆಯಲು ಜೈನ ಗುರು ಸುದತ್ತಚಾರ್ಯರು ತನ್ನ ಶಿಷ್ಯ ಸಳನಿಗೆ 'ಪೊಯ್ ಸಳ' (ಹೊಡೆ-ಸಳ) ಎಂದರು, ಆಗ ಸಳ ಹುಲಿಯೊಡನೆ ಕಾದಾಡಿ, ಅದನ್ನು ಕೊಂದ ಕಾರಣದಿಂದ ಈ ವಂಶದವರಿಗೆ ಹೊಯ್ಸಳರು ಎಂದು ಹೇಳಲಾಗುತ್ತದೆ. ಚಾರಿತ್ರಿಕವಾಗಿ ಈ ಸಂಸ್ಥಾಪಕನ ಹೆಸರು ನೃಪಕಾಮ ಎಂದು ಊಹಿಸಲಾಗಿದೆ. ಹೊಯ್ಸಳ ಸಾಮ್ರಾಜ್ಯವನ್ನು ವಿಸ್ತರಿಸಿದ ಅರಸರಲ್ಲಿ ಮೊದಲಿಗೆ ವಿನಯಾದಿತ್ಯ ಒಟ್ಟಿನಲ್ಲಿ ಹೊಯ್ಸಳ ವಂತದಲ್ಲಿ ನೃಪಕಾಮ, ವಿನಯಾದಿತ್ಯ, ಎರೆಯಂಗ, ಬಲ್ಲಾಳ, ವಿಷ್ಣುವರ್ಧನ, ಉದಯಾದಿತ್ಯ, ಕುಮಾರ ಬಲ್ಲಾಳ ಹೀಗೆ ಹಲವು ಪ್ರಮುಖ ಅರಸರು ರಾಜ್ಯಭಾರ ಮಾಡಿದರು. ಅವರಲ್ಲಿ(ಹೊಯ್ಸಳದಲ್ಲಿ) ಅತ್ಯಂತ ಪ್ರಸಿದ್ಧ ಅರಸು ಬಿಟ್ಟಿದೇವ/ಬಿಟ್ಟನ ಈತನ ನಂತರದ ಹೆಸರು ವಿಷ್ಣುವರ್ಧನ (ಆಡಳಿತ ಸುಮಾರು 1110-1142) ಇವನ ಆಡಳಿತದ ಕಾಲದಲ್ಲಿ ಹೊಯ್ಸಳ ಸಾಮ್ರಾಜ್ಯ ಬಲಿಷ್ಠವಾದ ಸಾಮ್ರಾಜ್ಯವಾಗಿತ್ತು ಕಲೆ ಮತ್ತು ಶಿಲ್ಪಕಲೆಗೆ ಬಹಳ ಪ್ರೋತ್ಸಾಹ ನೀಡಲಾಯಿತ ಈತನ ಪಟ್ಟದ ರಾಣಿ ಶಾಂತಲಾದೇವಿ ಪ್ರಸಿದ್ಧ ಭರತನಾಟ್ಯ ನರ್ತಕಿ ಮತ್ತು ಶಿಲ್ಪಕಲೆಯಲ್ಲಿ ಆಸಕ್ತಿಯಿದ್ದವಳಾಗಿದ್ದು ಇವಳು ಸಕಲ ಕಲಾ ಅಭ್ಯುದಯ ದೀಪಿಕೆಯಾಗಿದ್ದಳು. ಈ ಕಾಲದಲ್ಲಿಯೇ ಹೊಯ್ಸಳ ಶಿಲ್ಪಕಲೆಯ ಅತ್ಯುನ್ನತ ಉದಾಹರಣೆಗಳು ಮೂಡಿ ಬಂದವು. ಹಳೆಬೀಡಿನ ಹೊಯ್ಸಳೇಶ್ವರ ದೇವಾಲಯವನ್ನು ಕಟ್ಟಲು ಸುಮಾರು 39 ವರ್ಷಗಳ ಪರಿಶ್ರಮ, ಹಾಗೆಯೇ ಬೇಲೂರಿನ ಚನ್ನಕೇಶವ ದೇವಾಲಯವನ್ನು ಕಟ್ಟಲು 103 ವರ್ಷಗಳು ಬೇಕಾದವು ಇಲ್ಲಿನ ಶಿಲ್ಪಕಲೆ ದ್ರಾವಿಡ ಶೈಲಿ ಮತ್ತು ಆರ್ಯ ಶೈಲಿಗಳೆರಡರ ಗುಣಗಳನ್ನೂ ಹೊಂದಿದೆ.

## III. ಒಂದು ವಾಕ್ಯದಲ್ಲಿ ಉತ್ತರಿಸಿ.

**1. ಶಾಂತಲೆಯ ತಂದೆ ತಾಯಿ ಯಾರು?**

ಉ. ಶಾಂತಲೆಯ ತಾಯಿ ಮಾಚಿಕಬ್ಬೆ ಮತ್ತು ತಂದೆ ಮಾರಸಿಂಗಮಯ್ಯನವರು.

**2. ಹೊನ್ನಮ್ಮನ ದೇಗುಲವು ಹೇಗೆ ಓಂಕಾರಮಯವಾಯಿತು? ಅಲ್ಲಿ ನೆರೆದಿರುವವರು ಹೇಗೆ ಮಡಿಯಾದರು?**

ಉ. ಹೊನ್ನಮ್ಮನ ದೇಗುಲವು ನೃತ್ಯ, ಮಹಾ ಮಂಗಳಾರತಿಯೊಂದಿಗೆ, ಘಂಟೆ, ಜಾಗಟೆ, ಶಂಖಗಳ ನಾದ ಮೇಳಗೊಂಡ ಓಂಕಾರಮಯವಾಯಿತು. ಅಲ್ಲಿ ನೆರೆದಿದ್ದವರೆಲ್ಲರೂ ಭಕ್ತಿಯೆಂಬ ಭಾವತೀರ್ಥದಲ್ಲಿ ಮಿಂದು ಮಡಿಯಾದರು.

**3. ಅರ್ಚಕರು ದಣಾಯಕರ ಕೈಗೆ ಕೊಟ್ಟದ್ದೇನು? ಅದನ್ನು ಅವರು ಏನು ಮಾಡಿದರು? ಆಗ ಸರ್ವರೂ ಏನೆಂದು ಜಯಘೋಷ ಮಾಡಿದರು?**

ಉ. ಅರ್ಚಕರು, ದೇವಿಗೆ ಧರಿಸಿದ್ದ ತೋರಹಾರವನ್ನು ತೆಗೆದು ಡಣಾಯಕ ಮಾರಸಿಂಗಮಯ್ಯನವರ ಕೈಗೆ ಕೊಟ್ಟರು ಅವರು ಆ ಹಾರವನ್ನು ವಿಷ್ಣುವರ್ಧನರ ಕೊರಳಿಗೆ ಹಾಕಿದರು. ಆಗ ಎಲ್ಲರೂ ಸೇರಿ 'ಹೊಯ್ಸಳೇಶ್ವರರಿಗೆ ಜಯವಾಗಲಿ' ಎಂದು ಜಯಘೋಷ ಮಾಡಿದರು.

**4. 'ನಾಟ್ಯಮಯೂರಿ' ಕಾದಂಬರಿಯ ಲೇಖಕರು ಯಾರು?**

ಉ. 'ನಾಟ್ಯಮಯೂರಿ' ಕಾದಂಬರಿಯ ಲೇಖಕರು ಡಾ|| ಸಾ.ಶಿ ಮರುಳಯ್ಯನವರು.

## ಸಮಗ್ರ ಸಾಹಿತ್ಯ - ಸಣ್ಣಕಥೆಗಳು

## ಗದ್ಯ - 1. ಶಿವಭೂತಿಯ ಕಥೆ

**- ಪಂಚತಂತ್ರ**

ಪಂಚತಂತ್ರ ಭಾರತದ ಅತ್ಯುತ್ಕೃಷ್ಟ ಕೃತಿಗಳಲ್ಲಿ ಒಂದೆಂದು ಪರಿಗಣಿಸಲ್ಪಟ್ಟಿದೆ. ಇದನ್ನು ಮೊದಲಿಗೆ ಸಂಸ್ಕೃತದಲ್ಲಿ ಸುಮಾರು ಕ್ರಿ.ಶ. 550ರಲ್ಲಿ (ಅಥವಾ ಅದಕ್ಕೂ ಹಿಂದೆ) ಪ್ರಸಿದ್ಧ ವಿದ್ವಾಂಸ ಪಂಡಿತ ವಿಷ್ಣುಶರ್ಮ ಅವನ ಎಂಬತ್ತನೆ ವಯಸ್ಸಿನಲ್ಲಿ ಬರೆದಿದ್ದಾನೆ. ಇದು ವಿಶ್ವದ 50ಕ್ಕೂ ಹೆಚ್ಚು ಭಾಷೆಗಳಲ್ಲಿ ತರ್ಜುಮೆಗೊಂಡಿದೆ.

ಇವು ನೀತಿ ವಿಷಯವನ್ನು ಒಳಗೊಂಡಿದ್ದು ಪ್ರಾಣಿಗಳು ಮತ್ತು ಪಕ್ಷಿಗಳನ್ನು ಕುರಿತ ಕುತೂಹಲ ಹುಟ್ಟಿಸುವಂತಹ ಕಥೆಗಳಾಗಿವೆ. ಈ ಕಥೆಗಳಿಗೆ 'ಪಂಚತಂತ್ರ' ಎಂದು ಹೆಸರಿಡಲಾಗಿದೆ. ಪಂಚ ಎಂದರೆ ಐದು. ತಂತ್ರ ಎಂಬುದರ ಅರ್ಥವೇನೆಂದರೆ ಜೀವನದಲ್ಲಿ ಜಾಣ ನಡವಳಿಕೆಯ ವಿಧಾನ. ಹೇಗೆ ವಿಶ್ವಾಸವನ್ನು ಅಭಿವೃದ್ಧಿಪಡಿಸಿಕೊಳ್ಳುವುದು, ಜನರನ್ನು ಹೇಗೆ ಅರ್ಥಮಾಡಿಕೊಳ್ಳುವುದು, ಒಳ್ಳೆಯ ಗೆಳೆಯರನ್ನು ಹೇಗೆ ಆರಿಸಿ ಕೊಳ್ಳುವುದು, ಬುದ್ಧಿವಂತಿಕೆಯನ್ನು ಹೇಗೆ ಸಂಪಾದಿಸಿಕೊಳ್ಳುವುದು. ಜೀವನದಲ್ಲಿ ಹೇಗೆ ಸವಾಲುಗಳನ್ನು ಎದುರಿಸುವುದು ಎಂಬುದರ ಬಗ್ಗೆ ಬೋಧನೆಗಳಿಂದ ಇವನ್ನು ಇನ್ನಷ್ಟು ವಿಸ್ತರಿಸಲಾಗಿದೆ. ಪಂಚತಂತ್ರ ಕುರಿತ ಹಳೆಯ ಜಾಣ್ನುಡಿಯ ಪ್ರಕಾರ ಈ ವಿಜ್ಞಾನದಲ್ಲಿ ನಿಷ್ಣಾತನಾಗಿರುವವನು ಜೀವನದಲ್ಲಿ ಸದಾ ಯಶಸ್ಸನ್ನು ಸಾಧಿಸುತ್ತಾನೆ.

ಪಂಚತಂತ್ರದ ಕಥೆಗಳು ಮನುಷ್ಯನ ಗುಣಗಳ ಅನೇಕ ಮುಖಗಳನ್ನು ಅಂದರೆ ದುರಾಸೆ. ಕ್ರೌರ್ಯ, ನಂಬಿಕೆದ್ರೋಹ, ಅಪ್ರಾಮಾಣಿಕತೆ, ಮಾತ್ಸರ್ಯ, ಗಡಸುತನ ಮತ್ತು ಅಧಿಕಾರ ಹಾಗೂ ಸಂಪತ್ತಿನ ಲಾಲಸೆಗಳನ್ನು ಪ್ರಾಣಿಗಳ ನಡವಳಿಕೆಗಳ ರೂಪದಲ್ಲಿ ಅಭಿವ್ಯಕ್ತಗೊಳಿಸುವ ಮೂಲಕ ಮತ್ತು ಮನುಷ್ಯನೊಂದಿಗೆ ಅವುಗಳ ಪಾರಸ್ಪರಿಕ ಕ್ರಿಯೆಗಳನ್ನು ನಿರೂಪಿಸುವ ಮೂಲಕ ಪ್ರಕಟಗೊಳಿಸುತ್ತವೆ. ಅನ್ಯೋನ್ಯತೆ, ಪ್ರೀತಿ ಮತ್ತು ಕರುಣೆ, ನಿಸ್ವಾರ್ಥತೆಯಿಂದ ಕೂಡಿರುವ ಎದೆಗಾರಿಕೆ, ಸಾಮೂಹಿಕ ಬದುಕು, ಅನ್ಯೋನ್ಯ ಅರಿವು ಮತ್ತು ಜ್ಞಾನದ ಸಂಪಾದನೆಯ ವಿಷಯಗಳನ್ನು ನಮಗೆ ಬೋಧಿಸುತ್ತದೆ.

### I. ಪದಗಳ ಅರ್ಥ ತಿಳಿಯಿರಿ.

1. ಅರಣ್ಯ = ಕಾಡು, ವನ 2. ಬೇಡ = ಬೇಟೆಗಾರ, ಕಿರಾತ

3. ಪಾರ್ವಂ – ಬ್ರಾಹ್ಮಣನು 4. ವಿನಯ = ನಮ್ರತೆ

5. ಪುಂಡರೀಕ =ಹುಲಿ 6. ಪಕ್ಷಪಾತ = ಭೇದಭಾವ

8. ಸತ್ಕರಿಸು= ಉಪಚರಿಸು 7. ಪರ್ವತಪಂಕ್ತಿ = ಬೆಟ್ಟಗಳ ಸಾಲು

9. ಸಂಭ್ರಮ = ಸಡಗರ 10. ಉಪಕಾರ ಸ್ಮರಿಸದವನು

12. ಅಮೂಲ್ಯ = ಬೆಲೆ ಬಾಳುವ 11. ಆಭರಣ - ಒಡವೆ

13. ಅಪಕಾರ= ಕೆಡುಕು, ಕೇಡು 14. ಉಪಕಾರ = ಸಹಾಯ

15. ಪ್ರಸನ್ನವದನ = ಸಂತೋಷದ ಮುಖ

## I. ಒಂದು ವಾಕ್ಯದಲ್ಲಿ ಉತ್ತರಿಸಿರಿ.

**1. ಶಿವಭೂತಿ ಯಾರು? ಬಾವಿಯ ಬಳಿಗೇಕೆ ಬಂದನು?**

ಉ. ಶಿವಭೂತಿಯು ತೀರ್ಥಯಾತ್ರೆಗೆಂದು ಹೊರಟ ಒಬ್ಬ ದಯಾಳು ಬ್ರಾಹ್ಮಣನಾಗಿದ್ದನು. ಅವನು ಬಾಯಾರಿಕೆಯಿಂದ ನೀರು ಕುಡಿಯಲು ಬಾವಿಯ ಬಳಿಗೆ ಬಂದನು.

**2. ಹುಲಿಯು ಹೇಗೆ ಬಾವಿಯಲ್ಲಿ ಬಿದ್ದಿತು?**

ಉ. ಹುಲಿಯು ಕಂಬಳಕನೆಂಬ ಬೇಡನನ್ನು ಅಟ್ಟಿಸಿಕೊಂಡು ಬರುವಾಗ ಅರಣ್ಯದಲ್ಲಿದ್ದ ಬಾವಿಯಲ್ಲಿ ಬೇಡನು ಬಿದ್ದಾಗ, ಹುಲಿ ತಾನೂ ಕೋಪದಿಂದ ಕುರುಡಾಗಿ ಅದೇ ಬಾವಿಯೊಳಗೆ ಬಿದ್ದಿತು.

**3. ಹುಲಿಯಿಂದ ಬೀಳ್ಕೊಂಡ ಶಿವಭೂತಿ ಯಾರನ್ನು ಭೇಟಿಯಾದನು?**

ಉ. ಹುಲಿಯ ಸತ್ಕಾರದಿಂದ ಸಂತೋಷಗೊಂಡ ಶಿವಭೂತಿ ಬದರಿಕಾಶ್ರಮಕ್ಕೆ ಬಂದು ಅಲ್ಲಿಯ ವನದಲ್ಲಿದ್ದ ಚಪಲಕನೆಂಬ ಕಪಿಯನ್ನು ಭೇಟಿಯಾದನು.

**4. ಶಿವಭೂತಿ ಪದ್ಮನಗರಕ್ಕೆ ಏಕೆ ಬಂದನು?**

ಉ. ಶಿವಭೂತಿಯು ತಾನು ಬಾವಿಯಿಂದ ರಕ್ಷಿಸಿದ ಕಂಬಳಕನೆಂಬ ಬೇಡನನ್ನು ಭೇಟಿಯಾಗಲು ಪದ್ಮನಗರಕ್ಕೆ ಬಂದನು.

**5. ಸರ್ಪದ ಯಾವ ಮಾತು ಶಿವಭೂತಿಗೆ ನೆನಪಾಯಿತು?**

ಉ. ಸರೆಮನೆಯಲ್ಲಿದ್ದ ಶಿವಭೂತಿಗೆ "ಕಷ್ಟ ಬಂದಾಗ ನನ್ನನ್ನು ನೆನೆಯಿರಿ" ಎಂಬ ಸರ್ಪದ ಮಾತು ನೆನಪಿಗೆ ಬಂದಿತು.

## II. ಈ ಕೆಳಗಿನ ಪ್ರಶ್ನೆಗಳಿಗೆ ಎರಡು – ಮೂರು ವಾಕ್ಯದಲ್ಲಿ ಉತ್ತರಿಸಿರಿ.

**1) ಪಂಚತಂತ್ರ ಕೃತಿಯನ್ನು ರಚಿಸಿದವರು ಯಾರು? 'ಪಂಚತಂತ್ರವೆಂದರೇನು?**

ಉತ್ತರ : 6ನೇ ಶತಮಾನದಲ್ಲಿದ್ದ ವಿಷ್ಣುಕರ್ಮ ಎಂಬ ಪಂಡಿತನು ಸಂಸ್ಕೃತ ಭಾಷೆಯಲ್ಲಿ ಪಂಚತಂತ್ರ ಎಂಬ ಕೃತಿಯನ್ನು ರಚಿಸಿದನು. ಪಂಚತಂತ್ರ ಎಂದರೆ ಪಂಚ ಎಂದರೆ ಐದು. ತಂತ್ರ ಎಂಬುದರ ಅರ್ಥವೇನೆಂದರೆ ಜೀವನದಲ್ಲಿ ಜಾಣ ನಡವಳಿಕೆಯ ವಿಧಾನ. ಜೀವನದಲ್ಲಿ ವಿಶ್ವಾಸವನ್ನು ಬೆಳೆಸಿಕೊಳ್ಳುವುದು, ಜನರನ್ನು ಅರಿಯುವುದು,

**2. ಪಂಚತಂತ್ರವನ್ನು ಕುರಿತ ಹಳೆಯ ಜಾಣ್ನುಡಿ ಯಾವುದು? ಪಂಚತಂತ್ರ ಕಥೆಗಳು ಏನನ್ನು ಪ್ರಕಟಗೊಳಿಸುತ್ತವೆ ಹಾಗೂ ಬೋಧಿಸುತ್ತವೆ?**

ಉತ್ತರ : ಪಂಚತಂತ್ರವನ್ನು ಇಲ್ಲಿ ಒಂದು ವಿಜ್ಞಾನವೆಂದು ಕರೆಯಲಾಗಿದೆ. ಇದರ ಕುರಿತಾದ ಒಂದು ಜಾಣ್ನುಡಿಯ ಪ್ರಕಾರ, 'ಈ ವಿಜ್ಞಾನದಲ್ಲಿ ನಿಪುಣನಾದವನು ಜೀವನದಲ್ಲಿ ಸದಾ ಯಶಸ್ಸನ್ನು ಸಾಧಿಸುತ್ತಾನೆ.' ಈ ಕಥೆಗಳು ದುರಾಸೆ, ಕೌರ್ಯ, ನಂಬಿಕೆ ದ್ರೋಹ, ಅಪ್ರಾಮಾಣಿಕತೆ, ಮಾತ್ಸರ್ಯ, ಗಡಸುತನ, ಅಧಿಕಾರ ಹಾಗೂ ಸಂಪತ್ತಿನ ಲಾಲಸೆಗಳನ್ನು ಪ್ರಾಣಿಗಳ ನಡವಳಿಕೆಗಳ ರೂಪದಲ್ಲಿ ಅಭಿವ್ಯಕ್ತಗೊಳಿಸುವ ಮೂಲಕ ಮತ್ತು ಮನುಷ್ಯನೊಂದಿಗೆ ಅವುಗಳ ಪಾರಸ್ಪರಿಕ ಕ್ರಿಯೆಗಳನ್ನು ನಿರೂಪಿಸುವ ಮೂಲಕ ಪ್ರಕಟಗೊಳಿಸುತ್ತವೆ. ಅನ್ಯೋನ್ಯತೆ, ಪ್ರೀತಿ ಮತ್ತು ಕರುಣೆ, ನಿಸ್ವಾರ್ಥತೆಯಿಂದ ಕೂಡಿರುವ ಎದೆಗಾರಿಕೆ, ಸಾಮೂಹಿಕ ಬದುಕು, ಅನ್ಯೋನ್ಯ ಅರಿವು ಮತ್ತು ಜ್ಞಾನದ ಸಂಪಾದನೆಯ ವಿಷಯಗಳನ್ನು ನಮಗೆ ಬೋಧಿಸುತ್ತದೆ.

**3. ಮಹಾ ಅರಣ್ಯದಲ್ಲಿದ್ದ ಹಳೆಯ ಬಾವಿಯಲ್ಲಿ ಯಾರು ಯಾರು ಬಿದ್ದರು?**

ಉ. ಒಂದು ಮಹಾ ಅರಣ್ಯದಲ್ಲಿದ್ದ ಕಂಬಳಕನೆಂಬ ಬೇಡನನ್ನು ಒಂದು ಹುಲಿ ಅಟ್ಟಿಸಿಕೊಂಡು ಬಂದಿತು. ಆ ಬೇಡನು ಪ್ರಾಣಭಯದಿಂದ ದಿಕ್ಕುಗಾಣದೆ ಓಡುತ್ತಾ ಒಂದು ಹಳೆ ಬಾವಿಯಲ್ಲಿ ಬಿದ್ದನು. ಕೋಪದಿಂದ ಕುರುಡಾದ ಆ ಹುಲಿ ಆದೆ ಬಾವಿಯಲ್ಲಿ ಬಿದ್ದಿತು .ನೀರು ಕುಡಿಯಲು ಬಾವಿಯೊಳಗೆ ಇಳಿಯುತ್ತಾ ಅಲ್ಲಿ ಜೋತು ಬಿದ್ದಿದ್ದ ಒಂದು ಸರ್ಪವನ್ನು ಬಳ್ಳಿಯೆಂದು ಭ್ರಮಿಸಿ. ಅದನ್ನು ಹಿಡಿದು ಸರ್ಪದ ಜೊತೆ ಬಾವಿಯೊಳಗೆ ಬಿದ್ದಿತು. ಹೀಗೆ ಕಂಬಳಕ, ಹುಲಿ, ಕಪಿ ಮತ್ತು ಸರ್ಪ ಎಲ್ಲರೂ ಬಿದ್ದರು.

**4. ಹುಲಿಯು ಬಾವಿಯಿಂದ ಹೊರಬಂದ ಬಗೆ ಹೇಗೆ? ಆ ಹುಲಿ ಶಿವಭೂತಿಗೆ ಹೇಗೆ ಕೃತಜ್ಞತೆ ಸಲ್ಲಿಸಿತು?**

ಉತ್ತರ: ತೀರ್ಥಯಾತ್ರೆಗೆ ಹೊರಟ ಶಿವಭೂತಿಯು ನೀರು ಪಡೆಯಲು ಒಂದು ಬಳ್ಳಿಗೆ ತನ್ನ ಸಣ್ಣ ಕಲತಗಿಂಡಿಯನ್ನು ಕಟ್ಟಿ ಬಾವಿಯಲ್ಲಿ ಬಿಟ್ಟನು. ನೀರು ತುಂಬಿದ ಗಿಂಡಿಯನ್ನು ಮೇಲಕ್ಕೆ ಎತ್ತುವಾಗ, ಆದರೊಡನೆ ಒಂದು ಹುಲಿ ನೇತಾಡುತ್ತಿತ್ತು. ಆ ಹುಲಿಯು ವಿನಯದಿಂದ ನಮಸ್ಕರಿಸಿತು, 'ತಮ್ಮ ಉಪಕಾರದಿಂದ ನಾನು ಜೀವಸಹಿತ ಉಳಿದು ಬಂದೆನು. ದೂರದಲ್ಲಿ ಕಾಣುವ ಪರ್ವತ ಪಂಕ್ತಿಯ ತಪ್ಪಲಿನಲ್ಲಿ ಒಂದು ಗುಹೆಯಲ್ಲಿ ನಾನು ವಾಸಿಸುತ್ತೇನೆ. ನೀವು ಅಲ್ಲಿಗೆ ಬಂದರೆ, ಅಮೂಲ್ಯವಾದ ವಸ್ತುಗಳನ್ನು ಕಾಣಿಕೆಯಾಗಿ ಕೊಡುತ್ತೇನೆ" ಎಂದು ಹೇಳಿತು.

**5. ಬೇಡನನ್ನು ರಕ್ಷಿಸಬಾರದೆಂದು ಹುಲಿ ಶಿವಭೂತಿಗೆ ಹೇಳಲು ಕಾರಣವೇನು?**

ಉತ್ತರ: ಶಿವಭೂತಿಯು ಬಾವಿಯಲ್ಲಿ ಬಿದ್ದಿದ್ದ ಹುಲಿಯನ್ನು ರಕ್ಷಿಸಿದನು. ಆ ಹುಲಿಯು, 'ಆ ಬೇಡನನ್ನು ಮಾತ್ರ ರಕ್ಷಿಸಬೇಡಿ. ಅವನು ನೀಚ ನೀಚನಿಗೆ ಎಷ್ಟು ಉಪಕಾರ ಮಾಡಿದರೂ ತನ್ನ ನೀಚ ಬುದ್ಧಿ ಬಿಡುವುದಿಲ್ಲ. ನೀಚನಿಗೆ ಉಪಕಾರ ಮಾಡಿದರೆ ಅಪಕಾರವನ್ನೇ ಮಾಡುತ್ತಾನೆ. ಹಾವಿಗೆ ಹಾಲೆರೆದರೆ ಅದು ವಿಷವನ್ನೇ ಕಾರುವಂತೆ, ನೀಚನಾದವನು ಅಪಕಾರವನ್ನೇ ಮಾಡುತ್ತಾನೆ" ಎಂದು ಹೇಳಿ ಹೊರಟು ಹೋಯಿತು.

**6. ಕಪಿ ಮತ್ತು ಸರ್ಪಗಳು ಶಿವಭೂತಿಗೆ ಏನನ್ನು ಹೇಳಿದವು?**

ಉ. ಹುಲಿಯನ್ನು ಬಾವಿಯಿಂದ ರಕ್ಷಿಸಿದ ನಂತರ ಬ್ರಾಹ್ಮಣ ಶಿವಭೂತಿಯು, ಸರ್ಪವನ್ನು ಮತ್ತು ಚಪಲಕನೆಂಬ ಕಪಿಯನ್ನು ಬಾವಿಯಿಂದ ಹೊರತೆಗೆದನು ಎರಡೂ ಪ್ರಾಣಿಗಳೂ ಅವನಿಗೆ ನಮಸ್ಕರಿಸಿದವು ಕಪಿಯು, ನಿಮ್ಮ ಕರುಣೆಯಿಂದ ನಾನು ಬದುಕಿ ಉಳಿದೆನು. ನಾನು ಮರುಹುಟ್ಟು ಪಡೆದಂತಾಯಿತು.ನಾನು ಬದರಿಕಾಶ್ರಮದಲ್ಲಿ ವಾಸಿಸುತ್ತೇನೆ.ನೀವು ಅಲ್ಲಿಗೆ ವಂದರೆ ನನ್ನ ಶಕ್ತಿ ಮೀರಿ ಸತ್ಕರಿಸುತ್ತೇನೆಎಂದು ಹೇಳಿ ಹೊರಟಿತು.ಸರ್ಪವಯ ಹಾಗೆ ಹೇಳಿಕಷ್ಟ ಬಂದಾಗ ತನನ್ನು ನೆನೆಯುವಂತೆ ತಿಳಿಸಿ ಹೊರಟು ಹೋಯಿತು.ಬಂದಾಗ ತನ್ನನ್ನು ನೆನೆಯುವಂತೆ ಹೇಳಿ ಹೊರಟಿತು.

**7. ಹುಲಿಯ ಮಾತನ್ನು ಮೀರಿ ಶಿವಭೂತಿಯು ಕಂಬಳಕನನ್ನು ರಕ್ಷಿಸಲು ಕಾರಣವೇನು?**

ಉ. ತಾನು ಉಳಿದ ಪ್ರಾಣಿಗಳನ್ನು ಕಾಪಾಡಿ, ಈ ಕಂಬಳಕ ಎಂಬ ಬೇಡನನ್ನು ರಕ್ಷಿಸದೆ ಹೋದರೆ ಪಕ್ಷಪಾತ ತೋರಿದಂತಾಗುತ್ತದೆ ಎಂದು ಶಿವಭೂತಿ ಯೋಚಿಸಿದನು. 'ಯತ್ನರಾರ್ಥಂ ಶರೀರಂ' ಎಂದರೆ ಈ ದೇಹವಿರುವುದೇ ಇತರರ ಸಹಾಯಕ್ಕಾಗಿ, ಆದ್ದರಿಂದ ತಾನು ಬೇಡನನ್ನು ರಕ್ಷಿಸದೆ ಹೋದರೆ ಕೆಟ್ಟವನಾಗುತ್ತೇನೆ. ಏನಾದರೂ ಆಗಲಿ ಅವನನ್ನು ಕಾಪಾಡುತ್ತೇನೆ. ಎಂದು ಶಿವಭೂತಿ ಯೋಚಿಸಿದನು. ಹೀಗೆ ಪರೋಪಕಾರಿಯಾದ ಆ ಬ್ರಾಹ್ಮಣನು ದುರಾತ್ಮನಾದ ಬೇಡನನ್ನು ಬಾವಿಯಿಂದ ಹೊರತೆಗೆದನು.

**8. ತೀರ್ಥಯಾತ್ರೆ ಮುಗಿಸಿ ಬಂದ ಶಿವಭೂತಿಯನ್ನು ಹುಲಿ ಮತ್ತು ಕಪಿಗಳು ಹೇಗೆ ಸತ್ಕರಿಸಿದವು?**

ಉ. ಶಿವಭೂತಿಯು ತೀರ್ಥಯಾತ್ರೆ ಮುಗಿಸಿಕೊಂಡು ಪರ್ವತ ಸಾಲುಗಳ ತಪ್ಪಲಿನಲ್ಲಿ ಬರುತ್ತಿದ್ದಾಗ ಹುಲಿ ಬೇಗ ಓಡಿ ಬಂದು ಶಿವಭೂತಿಗೆ ನಮಸ್ಕರಿಸಿ ತನ್ನ ಗುಹೆಗೆ ಕರೆದುಕೊಂಡು ಹೋಯಿತು. ತನ್ನ ಬಳಿಯಿದ್ದ ಅಪಾರವಾದ ಅಮೂಲ್ಯ ಆಭರಣಗಳನ್ನು ಕೊಟ್ಟು ಸತ್ಕರಿಸಿತು. ತಾನು ಶ್ರೀಮಂತನಾದೆನೆಂದು ಸಂತೋಷ ಪಡುತ್ತ ಶಿವಭೂತಿಯು ಬದರಿಕಾಶ್ರಮಕ್ಕೆ ಬಂದನು. ಒಂದು ಮರದ ಕೆಳಗೆ ವಿಶ್ರಮಿಸುತ್ತಿದ್ದಾಗ. ಆ ವನದಲ್ಲಿದ್ದ ಕಪಿಯು ಅವನನ್ನು ಕಂಡು ಸಂತೋಷಪಟ್ಟಿತು. ಶಿವಭೂತಿಗೆ ಹಲಸು, ಮಾವು, ಪೇರಲು/ಲೆ, ಬಾಳೆ ಮುಂತಾದ ಸಿಹಿಯಾದ ಹಣ್ಣುಗಳನ್ನು ಕೊಟ್ಟು ಉಪಚರಿಸಿತು.

**9. ಶಿವಭೂತಿಯನ್ನು ರಾಜನು ಸೆರೆಮನೆಗೆ ಕಳುಹಿಸಿದ್ದು ಏಕೆ? ವಿವರಿಸಿ.**

**ಅಥವಾ**

**ಶಿವಭೂತಿಗೆ ಕಂಬಳಕನು ಮಾಡಿದ ವಿಶ್ವಾಸ ದ್ರೋಹವೇನು? ವಿವರಿಸಿ,**

ಉ. ಪದ್ಮನಗರದಲ್ಲಿದ್ದ ಬೇಡ ಕಂಬಳಕ ಶಿವಭೂತಿಯನ್ನು ಕಂಡು ನಮಸ್ಕರಿಸಿ ತನ್ನ ಮನೆಗೆ ಕರೆದುಕೊಂಡು ಹೋಗಿ ಕುಳಿತುಕೊಳ್ಳಲು ಹೇಳಿದನು. ನಂತರ ನೀವು ನನ್ನ ಮನೆಗೆ ಬಂದಿದ್ದೀರ. ನಿಮ್ಮನ್ನು ಸತ್ಕರಿಸಲು ನನ್ನ ಬಳಿ ಏನೂ ಇಲ್ಲ. ನಾನು ಬರಿಗೈ ಆಗಿದ್ದೇನೆ" ಎಂದು ತನ್ನ ಬಡತನದ ಸ್ಥಿತಿಯನ್ನು ವಿವರಿಸಿದನು. ಆಗ ಶಿವಭೂತಿಗೆ ಕನಿಕರವೆನಿಸಿತು. ಆ ಬೇಡನಿಗೆ ತನ್ನ ಬಳಿಯಿದ್ದಂತಹ ಅಮೂಲ್ಯ ಒಡವೆಗಳನ್ನು ತೋರಿಸಿದನು. ಕಂಬಳಕನು ಕೆಡುಕನ್ನೇ ಯೋಚಿಸುತ್ತಾ, ರಾಜನ ಬಳಿ ಹೋದನು. ಉಪಕಾರ ಸ್ಮರಣೆಯಿಲ್ಲದ ಬೇಡನು ರಾಜನಿಗೆ, 'ದೇವಾ! ನೀವು ತೊಡುವಂತಹ ಆಭರಣಗಳನ್ನು ನನ್ನ ಮನೆಗೆ ಬಂದಿರುವ ಒಬ್ಬ ಆಗಂತುಕ ಬ್ರಾಹ್ಮಣನು ತಂದಿದ್ದಾನೆ" ಎಂದು ಚಾಡಿ ಹೇಳಿದನು. ಆಗ ರಾಜನು ಸ್ವಲ್ಪವೂ ವಿಚಾರಿಸದೆ, ದೂತರ ಮೂಲಕ ಶಿವಭೂತಿಯನ್ನು ಕರೆಸಿ, ಅವನ ಬಳಿಯಿದ್ದ ಆಭರಣಗಳನ್ನೆಲ್ಲಾ ಕಿತ್ತುಕೊಂಡು ಆ ಬ್ರಾಹ್ಮಣನನ್ನು ಸೆರೆಮನೆಗೆ ಕಳುಹಿಸಿದನು.

**10. ಶಿವಭೂತಿಯು ರಾಜನು ನೀಡಿದ ಶಿಕ್ಷೆಯಿಂದ ಹೇಗೆ ಪಾರಾದನು? ವಿವರಿಸಿ.**

**ಅಥವಾ**

**ಶಿವಭೂತಿಗೆ ಸರ್ಪವು ಮಾಡಿದ ಉಪಕಾರವನ್ನು ವಿವರಿಸಿ.**

ಉ. ಪದ್ಮನಗರಕ್ಕೆ ಬಂದ ಶಿವಭೂತಿಯ ಮೇಲೆ ಬೇಡನು ರಾಜನ ಬಳಿ ದೂರು ನೀಡಿದ ಕಾರಣ, ಶಿವಭೂತಿಗೆ ಜೈಲು ಶಿಕ್ಷೆಯಾಯಿತು. ಅವನು ನೆನೆದೊಡನೆ ಸರ್ಪವು ಬಂದು ನಮಸ್ಕರಿಸಿತು. ಶಿವಭೂತಿ ನಡೆದ ವಿಷಯವನ್ನೆಲ್ಲಾ ಹೇಳಿದಾಗ ಸರ್ಪವು ಒಂದು ಉಪಾಯ ಸೂಚಿಸಿತು. ಅದು, 'ನಾನು ಈಗಲೇ ಹೋಗಿ ರಾಜಕುಮಾರನನ್ನು ಕಚ್ಚಿ ಕೊಲ್ಲುತ್ತೇನೆ. ಅವನನ್ನು ಬದುಕಿಸಲು ಯಾರಿಗೂ ಸಾಧ್ಯವಾಗುವುದಿಲ್ಲ. ನೀವು ಬಂದು ಉಪಾಯದಿಂದ ನೀರನ್ನು ಮಂತ್ರಿಸಿ ಹಾಕಿದೊಡನೆ ವಿಷವನ್ನೆಲ್ಲಾ ಕಳೆದು ಅವನನ್ನು ಬದುಕಿಸುತ್ತೇನೆ" ಎಂದು ಹೇಳಿತು. ಅದೇ ರೀತಿ ರಾಜಕುಮಾರನು ಹಾವು ಕಚ್ಚಿ ಸತ್ತಾಗ ಯಾರು ಮಂತ್ರಿಸಿದರೂ ಬದುಕಲಿಲ್ಲ. ಕೊನೆಗೆ ರಾಜನು ತನ್ನ ಮಗನನ್ನು ಬದುಕಿಸಿದವರಿಗೆ ಕೇಳಿದ್ದನ್ನು ಕೊಡುತ್ತೇನೆಂದು ಡಂಗುರ ಹೊಡೆಸಿದನು. ಮಗ ಶಿವಭೂತಿಪರ ರಾಜಕುಮಾರದ ಬಳಿಗೆ ಹೋಗಿ ನೀರನ್ನು ಮಾರಿ ಚಮುಕಿಸಿದಾಗ ರಾಜಕುಮಾರನು ಬದುಕಿ ಎದ್ದು ಕುಳಿತನು ನಡೆದ ವಿಚಾರವನೆಲ್ಲ ಶಿವಭುತಿಯಿಂದ ಕೇಳಿ ತೀದ ರಾಜನು, ಅವನಿಗೆ ಅಪಾರ ದ್ರವ್ಯವನ್ನು ಕೊಟ್ಟು ಕಳುಹಿಸಿದನು. ನಂತರ ಬೇಡನನ್ನು ಯಮಪುರಿಗೆ ಅಟ್ಟಿದನು.

**11. ಈ ಕಥೆಯಿಂದ 'ದುಷ್ಟರ ಸಹವಾಸ ಕೆಟ್ಟದ್ದು' ಎಂಬ ಪಾಠವನ್ನು ಹೇಗೆ ಕಲಿಯಬಹುದು?**

ಉತ್ತರ :ಈ ಕಥೆಯಲ್ಲಿ ಶಿವಭೂತಿಯೆಂಬ ಬ್ರಾಹ್ಮಣನು ಬಾವಿಯಲ್ಲಿ ಬಿದ್ದಿದ್ದ ಹುಲಿ, ಸರ್ಪ, ಕಪಿಗಳನ್ನು ರಕ್ಷಿಸಿದನು. ಹುಲಿಯು, ಬಾವಿಯಲ್ಲಿ ಬಿದ್ದ ನೀಚನಾದ ಬೇಡನನ್ನು ರಕ್ಷಿಸಬೇಡವೆಂದು ಹೇಳಿದರೂ, ಶಿವಭೂತಿಯು ಕರುಣೆಯಿಂದ ಕೂಡಿದವನಾಗಿ ಪಕ್ಷಪಾತ ಮಾಡಲು ಇಷ್ಟವಿಲ್ಲದೆ ಬೇಡನನ್ನು ರಕ್ಷಿಸಿದನು. ಹುಲಿ ಮತ್ತು ಕಪಿಗಳಿಂದ ಸತ್ಕಾರವನ್ನು ಪಡೆದ ಬಳಿಕ, ಬೇಡನನ್ನು ಭೇಟಿಯಾಗಲು ಪದ್ಮನಗರಕ್ಕೆ ಬಂದನು. ಶಿವಭೂತಿ ತನಗೆ ಹುಲಿ ಕಾಣಿಕೆಯಾಗಿ ನೀಡಿದ್ದ ಅಮೂಲ್ಯವಾದ ಆಧರಣಗಳನ್ನು ಬೇಡನಿಗೆ ತೋರಿಸಿದನು. ಆ ನೀಚ ಬೇಡನು ಊರಿನ ರಾಜನ ಬಳಿಗೆ ಹೋಗಿ, ಶಿವಭೂತಿಯು ರಾಜರ ಆಭರಣಗಳನ್ನು ಕದ್ದು ತಂದಿದ್ದಾನೆಂದು ಚಾಡಿ ಹೇಳಿದನು. ಆಗ ರಾಜನು ಶಿವಭೂತಿ ಹತ್ತಿರವಿದ್ದ ಆಭರಣಗಳನ್ನು ಕಿತ್ತುಕೊಂಡು, ಅವನನ್ನು ಸೆರೆಮನೆಗೆ ಹಾಕಿದನು.ಹೀಗೆ ದುಷ್ಟನಾದ ಬೇಡನಿಗೆ ಸಹಾಯ ಮಾಡಿದ ಕಾರಣ, ಒಳ್ಳೆಮನಸ್ಸಿನ ಶಿವಭೂತಿಗೆ ಕೇಡುಂಟಾಯಿತು. ಆದ್ದರಿಂದ ಈ ಕಥೆಯಿಂದ 'ದುಷ್ಟರ ಸಹವಾಸ ಕೆಟ್ಟದ್ದು" ಎಂಬ ನೀತಿಪಾಠವನ್ನು ಕಲಿಯಬಹುದು.

**III. ಸಂದರ್ಭದೊಡನೆ ವಿವರಿಸಿ.**

**1. "ಶಿವಭೂತಿಯೆಂಬ ಪಾರ್ವಂ ಬರುತುಂ."**

ವಿಷ್ಣುಶರ್ಮ ರಚಿಸಿರುವ .'ಪಂಚತಂತ್ರ' ಕೃತಿಯಿಂದ ಆರಿಸಿರುವ ಈ ವಾಕ್ಯವನ್ನು 'ಶಿವಭೂತಿಯ ಕಥೆ' ಎಂಬ ಪಾಠದಿಂದ ಆರಿಸಲಾಗಿದೆ.

ಪಾರ್ವಂ ಎಂದರೆ ಬ್ರಾಹ್ಮಣ ಒಂದು ಮಹಾರಣ್ಯದಲ್ಲಿದ್ದ ಬಾವಿಯಲ್ಲಿ ಒಬ್ಬ ಬೇಡ, ಒಂದು ಹುಲಿ, ಕಪಿ ಮತ್ತು ಹಾವುಗಳೆಲ್ಲಾ ಆಕಸ್ಮಿಕವಾಗಿ ಬಿದ್ದರು. ಅದೇ ಸಮಯಕ್ಕೆ ಶಿವಭೂತಿಯೆಂಬ ಒಬ್ಬ ಬ್ರಾಹ್ಮಣನು ಆ ದಾರಿಯಾಗಿ ಬಂದನು. ಅವನು ಶುದ್ಧ ದೇಹ ಮತ್ತು ಮನಸ್ಸನ್ನು ಹೊಂದಿದವನಾಗಿದ್ದು, ದಯೆ ಮತ್ತು ನಿಸ್ವಾರ್ಥಗುಣಗಳಿಂದ ಕೂಡಿದ್ದನು. ಅವನು ಸಂತೋಷ ಚಿತ್ತದಿಂದ ತೀರ್ಥಯಾತ್ರೆಗೆ ಹೊರಟಿದ್ದನು. ಬಾಯಾರಿಕೆಯಾದ ಕಾರಣ ಆ ಬಾವಿಯ ಬಳಿಗೆ ನೀರು ಕುಡಿಯಲು ಬಂದನು ಎಂದು ಹೇಳುವ ಸಂದರ್ಭದಲ್ಲಿ ಈ ಮಾತು ಬಂದಿದೆ.

**2. "ದೂರದಲ್ಲಿ ಕಾಣುವ ಪರ್ವತ ಪಂಕ್ತಿಯ ತಪ್ಪಲಿನಲ್ಲಿರುವ ಒಂದು ಗುಹೆಯಲ್ಲಿ ವಾಸಿಸುತ್ತಿದ್ದೇನೆ."**

ವಿಷ್ಣುಶರ್ಮ ರಚಿಸಿರುವ .'ಪಂಚತಂತ್ರ' ಕೃತಿಯಿಂದ ಆರಿಸಿರುವ ಈ ವಾಕ್ಯವನ್ನು 'ಶಿವಭೂತಿಯ ಕಥೆ' ಎಂಬ ಪಾಠದಿಂದ ಆರಿಸಲಾಗಿದೆ

ಈ ಮಾತನ್ನು ಹುಲಿಯು ಶಿವಭೂತಿ ಎಂಬ ಬ್ರಾಹ್ಮಣನಿಗೆ ಹೇಳಿತು.

ಶಿವಭೂತಿಯೆಂಬ ಬ್ರಾಹ್ಮಣನು ತೀರ್ಥ ಯಾತ್ರೆಗೆ ಹೋಗುವ ದಾರಿಯಲ್ಲಿ ಬಾಯಾರಿಕೆಯಿಂದ ನೀರು ಕುಡಿಯಲು ಒಂದು ಬಾವಿಯ ಬಳಿ ಬಂದನು. ನೀರು ಪಡೆಯಲು ಒಂದು ಬಳ್ಳಿಗೆ ತನ್ನ ಸಣ್ಣ ಕಲಶಗಿಂಡಿಯನ್ನು ಕಟ್ಟಿ ಬಾವಿಯಲ್ಲಿ ಬಿಟ್ಟನು. ನೀರು ತುಂಬಿದ ಗಿಂಡಿಯನ್ನು ಮೇಲಕ್ಕೆ ಎತ್ತುವಾಗ, ಆದರೊಡನೆ ಒಂದು ಹುಲಿ ನೇತಾಡುತ್ತಿತ್ತು. ಶಿವಭೂತಿಗೆ ಕೃತಜ್ಞತೆ ಸೂಚಿಸುತ್ತಾ ನಮಸ್ಕರಿಸಿತು. ನಂತರ ಮೇಲಿನ ಮಾತನ್ನು ಹೇಳಿತು.

**3. "ನೀನು ಹೇಳಿದ ಪ್ರಾಣಿಗಳನ್ನು ರಕ್ಷಿಸಿ, ತೀರ್ಥಯಾತ್ರೆ ಮುಗಿಸಿ ನಿನ್ನಲ್ಲಿಗೆ ಬರುತ್ತೇನೆ."**

ಉ. ಈ ವಾಕ್ಯವನ್ನು 'ಶಿವಭೂತಿಯ ಕಥೆ' ಎಂಬ ಪಾಠದಿಂದ ಆರಿಸಲಾಗಿದೆ.

ಈ ಮಾತನ್ನು ಶಿವಭೂತಿಯು ಹುಲಿಗೆ ಹೇಳಿದನು.

ಕಂಬಳಕನೆಂಬ ಬೇಡನನ್ನು ಅಟ್ಟಿಸಿಕೊಂಡು ಬಂದ ಹುಲಿಯು ಕೋಪದಿಂದ ಕುರುಡಾಗಿ ಅವನ ಹಿಂದೆಯೇ ಬಾವಿಯೊಳಗೆ ಬಿದ್ದು ಬಿಟ್ಟಿತು. ತೀರ್ಥಯಾತ್ರೆಗೆಂದು ಹೊರಟಿದ್ದ ಶಿವಭೂತಿ ಬಾವಿಯಿಂದ ನೀರು ಪಡೆಯಲು ತನ್ನ ಕಳತಗಿಂಡಿಯನ್ನು ಬಳ್ಳಿಗೆ ಕಟ್ಟಿ ಬಾವಿಯೊಳಗೆ ಬಿಟ್ಟು, ಎಳೆದಾಗ ಅದರ ಜೊತೆ ಹುಲಿಯೂ ಮೇಲಕ್ಕೆ ಬಂತು. ತನ್ನನ್ನು ಕಾಪಾಡಿದ ಶಿವಭೂತಿಗೆ ನಮಸ್ಕರಿಸಿ, ಪರ್ವತದ ತಪ್ಪಲಿನಲ್ಲಿರುವ ತನ್ನ ಗುಹೆಗೆ ಬಂದರೆ ಅಮೂಲ್ಯ ಒಡವೆಗಳನ್ನು ಕಾಣಿಕೆಯಾಗಿ ನೀಡುತ್ತೇನೆಂದು ತಿಳಿಸಿತು. ಆ ಸಂದರ್ಭದಲ್ಲಿ ಶಿವಭೂತಿ ಮೇಲಿನ ಮಾತುಗಳನ್ನು ಹೇಳಿದನು.

**4. ನೀಚನಿಗೆ ಎಷ್ಟು ಉಪಕಾರ ಮಾಡಿದರೂ ತನ್ನ ನೀಚ ಬುದ್ಧಿಯನ್ನು ಬಿಡುವುದಿಲ್ಲ."**

ಉ. ಈ ವಾಕ್ಯವನ್ನು 'ಶಿವಭೂತಿಯ ಕಥೆ' ಎಂಬ ಪಾಠದಿಂದ ಆರಿಸಲಾಗಿದೆ.

ಈ ಮಾತನ್ನು ಹುಲಿಯು ಶಿವಭೂತಿಗೆ ಹೇಳಿತು.

ಶಿವಭೂತಿಯು ಬಾವಿಯಲ್ಲಿ ಬಿದ್ದಿದ್ದ ಹುಲಿಯನ್ನು ರಕ್ಷಿಸಿದನು. ಅದು ಅವನಿಗೆ ನಮಸ್ಕರಿಸಿ, ಪರ್ವತದ ತಪ್ಪಲಿನಲ್ಲಿರುವ ತನ್ನ ಗುಹೆಗೆ ಬಂದರೆ ಅಮೂಲ್ಯ ಕಾಣಿಕೆಗಳನ್ನು ಕೊಡುವುದಾಗಿ ಹೇಳಿತು. ಶಿವಭೂತಿಯು ಬಾವಿಯಲ್ಲಿ ಬಿದ್ದಿರುವ ಇತರ ಪ್ರಾಣಿಗಳನ್ನು ರಕ್ಷಿಸಿ, ತೀರ್ಥಯಾತ್ರೆ ಮುಗಿಸಿಕೊಂಡು ಬರುವುದಾಗಿ ಹೇಳಿದನು. ಆಗ ಆ ಹುಲಿಯು, ಆ ಬೇಡನನ್ನು ಮಾತ್ರ ರಕ್ಷಿಸ ಬೇಡಿ. ಅವನು ನೀಚ, ನೀಚನಿಗೆ ಎಷ್ಟು ಉಪಕಾರ ಮಾಡಿದರೂ ತನ್ನ ನೀಚ ಬುದ್ಧಿ ಬಿಡುವುದಿಲ್ಲ. ನೀಚನಿಗೆ ಉಪಕಾರ ಮಾಡಿದರೆ ಅಪಕಾರವನ್ನೇ ಮಾಡುತ್ತಾನೆ" ಎಂದು ಹೇಳಿ ಹೊರಟು ಹೋಯಿತು.

**5. "ನಾನು ಬದರಿಕಾಶ್ರಮದಲ್ಲಿದ್ದೇನೆ."**

ಉ. ಈ ವಾಕ್ಯವನ್ನು 'ಶಿವಭೂತಿಯ ಕಥೆ' ಎಂಬ ಪಾಠದಿಂದ ಆರಿಸಲಾಗಿದೆ.

ಈ ಮಾತನ್ನು ಕಪಿಯು ಶಿವಭೂತಿಗೆ ಹೇಳಿತು.

ಹುಲಿಯನ್ನು ಬಾವಿಯಿಂದ ರಕ್ಷಿಸಿದ ನಂತರ ಬ್ರಾಹ್ಮಣ ಶಿವಭೂತಿಯು, ಸರ್ಪವನ್ನು ಮತ್ತು ಚಪಲಕನೆಂಬ ಕಪಿಯನ್ನು ಬಾವಿಯಿಂದ ಹೊರತೆಗೆದನು. ಎರಡೂ ಪ್ರಾಣಿಗಳೂ ಅವನಿಗೆ ನಮಸ್ಕರಿಸಿದವು. ಕಪಿಯು, ನಿಮ್ಮ ಕರುಣೆಯಿಂದ ನಾನು ಬದುಕಿ ಉಳಿದೆನು. ನಾನು ಮರು ಹುಟ್ಟು ಪಡೆದಂತಾಯಿತು. ನಾನು ಬದರಿಕಾಶ್ರಮದಲ್ಲಿ ವಾಸಿಸುತ್ತೇನೆ. ನೀವು ಅಲ್ಲಿಗೆ ಬಂದರೆ ನನ್ನ ಶಕ್ತಿ ಮೀರಿ ಸತ್ಕರಿಸುತ್ತೇನೆ" ಎಂದು ಹೇಳಿ ಹೊರಟಿತು.

**6. ನೀವು ಬಂದಿದ್ದೀರ. ನಿಮ್ಮನ್ನು ಸತ್ಕರಿಸಲು ಈಗ ನನ್ನಲ್ಲಿ ಏನೂ ಇಲ್ಲ."**

ಉ. ಈ ವಾಕ್ಯವನ್ನು 'ಶಿವಭೂತಿಯ ಕಥೆ' ಎಂಬ ಪಾಠದಿಂದ ಆರಿಸಲಾಗಿದೆ.

ಈ ಮಾತನ್ನು ಬೇಡನು ಶಿವಭೂತಿಗೆ ಹೇಳಿದನು.

ತೀರ್ಥಯಾತ್ರೆಯನ್ನು ಮುಗಿಸಿಕೊಂಡು ಶಿವಭೂತಿ ಹುಲಿ ಮತ್ತು ಕಪಿಗಳ ಆತ್ಮೀಯ ಸತ್ಕಾರವನ್ನು ಪಡೆದು. ಪದ್ಮನಗರಕ್ಕೆ ಬಂದನು. ಅಲ್ಲಿ ಶಿವಭೂತಿ ಬಾವಿಯಿಂದ ರಕ್ಷಿಸಿದ್ದ ಬೇಡ ಕಂಬಳಕನು ವಾಸವಾಗಿದ್ದನು. ಅವನು ಶಿವಭೂತಿಯನ್ನು ತನ್ನ ಮನೆಗೆ ಕರೆದುಕೊಂಡು ಹೋಗಿ ಕುಳಿತುಕೊಳ್ಳಲು ಹೇಳಿದನು. ನಂತರ ತನ್ನ ದೀನಸ್ಥಿತಿಯನ್ನು ತಿಳಿಸುತ್ತಾ ಮೇಲಿನ ಮಾತನ್ನು ಹೇಳಿದನು.

**7. 'ದೇವಾ! ನೀವು ತೊಡುವ ಆಭರಣಗಳನ್ನು ನನ್ನ ಮನೆಯಲ್ಲಿರುವ ಒಬ್ಬ ಆಗಂತುಕ ಬ್ರಾಹ್ಮಣನು ತಂದಿದ್ದಾನೆ."**

ಉ. ಈ ವಾಕ್ಯವನ್ನು 'ಶಿವಭೂತಿಯ ಕಥೆ' ಎಂಬ ಪಾಠದಿಂದ ಆರಿಸಲಾಗಿದೆ.

ಈ ಮಾತನ್ನು ಬೇಡನು ಆ ಊರಿನ ರಾಜನಿಗೆ ಹೇಳಿದನು.

ಪದ್ಮನಗರಕ್ಕೆ ಹೋದ ಶಿವಭೂತಿಯು ಬೇಡನನ್ನು ಭೇಟಿಯಾದನು. ತನ್ನ ಮನೆಗೆ ಅವನನ್ನು ಕರೆದುಕೊಂಡು ಹೋದ ಬೇಡನು ತನ್ನ ನಿರುಪಾಯ ಸ್ಥಿತಿಯನ್ನು ವಿವರಿಸಿದನು. ಅವನ ದೀನತೆಯನ್ನು ಕಂಡು ಶಿವಭೂತಿಗೆ ಕರುಣೆಯುಂಟಾಗಿ, ತನಗೆ ಹುಲಿ ನೀಡಿದ್ದ ಬೆಲೆ ಬಾಳುವ ಒಡವೆಗಳನ್ನು ಬೇಡನಿಗೆ ತೋರಿದನು. ಕೃತಘ್ನನಾದ ಆ ಬೇಡನು ತನ್ನ ಪ್ರಾಣ ಉಳಿಸಿದ್ದ ಶಿವಭೂತಿಗೆ ಕೇಡುಕನ್ನೇ ಎಣಿಸಿದನು. ತಕ್ಷಣ ಆ ಊರಿನ ರಾಜನ ಬಳಿ ಹೋಗಿ ಮೇಲಿನ ಮಾತುಗಳನ್ನು ಹೇಳುತ್ತಾ, ದೂರು ಕೊಟ್ಟನು.

**8. "ಕಷ್ಟ ಬಂದಾಗ ನನ್ನನ್ನು ನೆನೆಯಿರಿ."**

ಉ: ಈ ವಾಕ್ಯವನ್ನು 'ಶಿವಭೂತಿಯ ಕಥೆ' ಎಂಬ ಪಾಠದಿಂದ ಆರಿಸಲಾಗಿದೆ.

ಈ ಮಾತನ್ನು ಸರ್ಪವು ಶಿವಭೂತಿಗೆ ಹೇಳಿತು.

ಬಾವಿಯಲ್ಲಿ ಬಿದ್ದಿದ್ದ ಬೇಡನನ್ನು ಶಿವಭೂತಿ ಕಾಪಾಡಿದ್ದರೂ ಕೃತಘ್ನನಾದ ಕಂಬಳಕನು ಅವಿವೇಕಿಯಾಗಿ ವರ್ತಿಸಿದನು. ಪದ್ಮನಗರಕ್ಕೆ ಬಂದ ಶಿವಭೂತಿಯ ಮೇಲೆ ಬೇಡನು ರಾಜನ ಬಳಿ ದೂರು ನೀಡಿದ ಕಾರಣ ಶಿವಭೂತಿಗೆ ಜೈಲು ಶಿಕ್ಷೆಯಾಯಿತು. ಕಷ್ಟ ಬಂದಾಗ ತನ್ನನ್ನು ನೆನೆಯಿರಿ ಎಂದು ಹೇಳಿದ ಸರ್ಪದ ಮಾತು ನೆನಪಾಗಿ, ಅದನ್ನು ನೆನೆದೊಡನೆ ಸರ್ಪವು ಬಂದು ನಮಸ್ಕರಿಸಿತು. ಶಿವಭೂತಿ ನಡೆದ ವಿಷಯವನ್ನೆಲ್ಲಾ ಹೇಳಿದಾಗ ಸರ್ಪವು ಒಂದು ಉಪಾಯ ಸೂಚಿಸಿತು.